**ಕರ್ನಾಟಕ ಸರ್ಕಾರ**

ಸಂಖ್ಯೆ: ಕಅಂಪ್ರಾ/ಕೊ.ಯಂ.ನೋಂ-6/2016-17

ಆಯುಕ್ತರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ಅಂತರ್ಜಲ ಪ್ರಾಧಿಕಾರ
ನಂ.49, ಖನಿಜ ಭವನ, ದೇವರಾಜ ಅರಸ್ ರಸ್ತೆ,
ಬೆಂಗಳೂರು, ದಿನಾಂಕ:04.08.2016
ಇ-ಮೇಲ್: gwdkar@gmail.com
ದೂರವಾಣಿ : 080 -22269634

9 AUG 2016

**ಸುತ್ತೋಲೆ**

ವಿಷಯ: ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಯಾದ ರಿಗ್ ಸಂಸ್ಥೆಗಳಿಗೆ / ಮಾಲೀಕರಿಗೆ ಕೊಳವೆಬಾವಿ ಕೊರೆಯುವ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ: ಕಅಂಪ್ರಾ/ಕೊ.ಯಂ.ನೋಂ/6/2016-17 ದಿನಾಂಕ: 22.01.2016.
2. ದಿನಾಂಕ:25.05.2016 ರಂದು ಜರುಗಿದ ಕರ್ನಾಟಕ ಅಂತರ್ಜಲ ಪ್ರಾಧಿಕಾರದ ಸಭೆಯ ನಡವಳಿಯ ಸೂಚನೆಯಂತೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಅಂತರ್ಜಲದ ಅತಿಬಳಕೆಯನ್ನು ನಿಯಂತ್ರಿಸಿ, ಅಂತರ್ಜಲ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕರ್ನಾಟಕ ಅಂತರ್ಜಲ ಅಧಿನಿಯಮ 2011 ಮತ್ತು ನಿಯಮಾವಳಿ 2012ನ್ನು ಸರ್ಕಾರವು ಜಾರಿಗೆ ತಂದಿರುತ್ತದೆ.

ಈ ಅಧಿನಿಯಮದ ಪ್ರಕರಣ 13 ರಂತೆ ರಾಜ್ಯದಲ್ಲಿ ಕೊಳವೆಬಾವಿ ಕೊರೆಯುವ ಕಾರ್ಯ ನಿರ್ವಹಿಸುವ ರಿಗ್ ಸಂಸ್ಥೆ/ ಮಾಲೀಕರು ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ. ಜೂನ್ 2016ರ ಅಂತ್ಯದವರೆಗೆ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಗೊಂಡು ನಮೂನೆ- 7ಎ ವಿತರಿಸಲಾದ ವಿವರಗಳನ್ನು ಇಲಾಖಾ ವೆಬ್‌ಸೈಟ್ www.antharjala.kar.nic.in ರಲ್ಲಿ ಅಳವಡಿಸಲಾಗಿದೆ.

ನಮೂನೆ-7ಎ ಹೊಂದಿರದ ರಿಗ್ ಯಂತ್ರಗಳು ವಿವಿಧ ಇಲಾಖೆಗಳಲ್ಲಿ ಟೆಂಡರ್‌ನ ಮೂಲಕ ಕೊಳವೆಬಾವಿ ಕೊರೆಯುವ ಕಾರ್ಯದಲ್ಲಿ ನಿರತರಾಗಿರುವುದು ಕಾನೂನಿನ ಉಲ್ಲಂಘನೆಯಾಗಿದ್ದು, ಈ ಬಗ್ಗೆ ಸಾರ್ವಜನಿಕರಿಂದಲೂ/ ಸರ್ಕಾರದ ಹಂತದಲ್ಲಿ ನಡೆಸುವ ಉನ್ನತ ಮಟ್ಟದ ಸಭೆಯಲ್ಲಿ ಚರ್ಚಿತಗೊಂಡು ಇಂತಹ ಅನಧಿಕೃತ ಕೊಳವೆಬಾವಿ ಕೊರೆಸುವ ಕಾರ್ಯದಲ್ಲಿ ನಿರತಗೊಂಡ ರಿಗ್ ಯಂತ್ರಗಳ ವಿರುದ್ಧ ಕಠಿಣ ಕ್ರಮ ಜರುಗಿಸಲು ಸೂಚಿಸಲಾಗಿದೆ.

ಸರ್ಕಾರದ ವಿವಿಧ ಇಲಾಖೆಗಳ ಮೂಲಕ ಮತ್ತು ವಿವಿಧ ಯೋಜನೆಯಡಿ ಹಮ್ಮಿಕೊಳ್ಳಲಾದ ಕೊಳವೆಬಾವಿ ಕೊರೆಯಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು ಕರೆಯಲಾಗುವ ಟೆಂಡರ್‌ಗಳಲ್ಲಿ ಭಾಗವಹಿಸುವ ಟೆಂಡರ್‌ದಾರರು ಕಡ್ಡಾಯವಾಗಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಣಿಗೊಂಡು ಮಾನ್ಯ ಇರುವ ನಮೂನೆ -7ಎ ಹೊಂದಿರಬೇಕಾಗಿರುತ್ತದೆ. ಆದ್ಯಾಗ್ಯೂ ನಮೂನೆ -7ಎ ಹೊಂದಿಲ್ಲದೆ ಇರುವ ರಿಗ್ ಯಂತ್ರಗಳನ್ನು ಹೊಂದಿರುವ ಸಂಸ್ಥೆಗಳು / ಮಾಲೀಕರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತಿರುವುದು ಹಾಗೂ ಅಂತಹ ಟೆಂಡರ್‌ದಾರರಿಗೆ ಕೊಳವೆಬಾವಿ ಕೊರೆಯವ ಟೆಂಡರ್ ಹಂಚಿಕೆ ಮಾಡುತ್ತಿರುವುದು ಕರ್ನಾಟಕ ಅಂತರ್ಜಲ ಅಧಿನಿಯಮ 2011 ಪ್ರಕರಣ 13 ರ ಉಲಂಘನೆಯಾಗಿರುತ್ತದೆ.

D:\R & D\Ground Water 2016-17\KGA Letters.docx

ಸ್ವೀಕೃತವಾಗಿದೆ 9 AUG 2016
ದಿನಾಂಕ........................

Scanned by CamScanner

ಇಂತಹ ಅನಧಿಕೃತ ರಿಗ್ ಯಂತ್ರಗಳಿಗೆ ಸಹಕಾರ ನೀಡಿದಲ್ಲಿ ವಿವೇಚನಾರಹಿತವಾಗಿ ಅನಧಿಕೃತ ಕೊಳವೆಬಾವಿಗಳ ನಿರ್ಮಾಣ ಹೆಚ್ಚಾಗುತ್ತದೆ ಹಾಗೂ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಮುಂದುವರೆದು ಅನಧಿಕೃತ ರಿಗ್‌ಗಳಿಂದ ಕೊರೆದ ಕೊಳವೆಬಾವಿಗಳು ವಿಫಲವಾದಲ್ಲಿ, ಅಂತಹ ವಿಫಲ ಕೊಳವೆಬಾವಿಗಳಲ್ಲಿ ಮಕ್ಕಳು ಬಿದ್ದು ಅವಘಡಗಳು ಸಂಭವಿಸುತ್ತಿರುವುದು ತಮಗೆ ತಿಳಿದಿರುವ ವಿಷಯವಾಗಿದೆ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಉಲ್ಲೇಖಿತ ವಿಷಯದ ಮೇಲೆ WP 38276/14 (PIL) ರಲ್ಲಿ ದಾಖಲಾಗಿದ್ದು, ಅಂತಿಮ ಆದೇಶ ದಿನಾಂಕ: 19.01.2015 ರಂತೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯದ ವ್ಯಾಪ್ತಿಯಲ್ಲಿ ಕೊರೆಯುವ ಸಫಲ ಮತ್ತು ವಿಫಲ ಕೊಳವೆ ಬಾವಿಗಳ ಬಗ್ಗೆ ವರದಿಯನ್ನು ಕರ್ನಾಟಕ ಲೀಗಲ್ ಸರ್ವೀಸ್‌ಸ ಪ್ರಾಧಿಕಾರ ಇವರಿಗೆ ಒದಗಿಸಲು ಸೂಚಿಸಿದೆ. ಅನಧಿಕೃತವಾಗಿ ಕೊಳವೆ ಬಾವಿ ನಿರ್ಮಾಣಗೊಂಡಲ್ಲಿ ಸರಿಯಾದ ಮಾಹಿತಿ ಸಿಗುವುದಿಲ್ಲ ಮತ್ತು ಅಧಿಕೃತ ನಮೂನೆ-7ಎ ಹೊಂದಿರುವವರಿಗೆ ಸಹ ಟೆಂಡರ್ ಹಂಚಿಕೆ ದೊರೆಯದೆ ಅವಕಾಶ ವಂಚಿತರಾಗುತ್ತಾರೆ. ನಮೂನೆ -7ಎ ಹೊಂದಿರದ ಟೆಂಡರ್‌ದಾರರಿಗೆ ಟೆಂಡರ್ ಹಂಚಿಕೆ ಮಾಡುತ್ತಿರುವುದು ನೇರವಾಗಿ ಅನಧಿಕೃತ ರಿಗ್ ಯಂತ್ರಗಳಿಗೆ ಸಹಕಾರ ನೀಡಿದಂತಾಗುವುದು. ಹಾಗೂ ಸರ್ಕಾರವು ಜಾರಿಗೆ ತಂದಿರುವ ಕರ್ನಾಟಕ ಅಂತರ್ಜಲ ಅಧಿನಿಯಮ 2011 ರ ಉದ್ದೇಶವು ಫಲಿಸುವುದಿಲ್ಲ.

ಈ ಮೇಲೆ ವಿವರಿಸಿದ ಎಲ್ಲಾ ಹಿನ್ನೆಲೆಯಲ್ಲಿ ತಮ್ಮ ಇಲಾಖೆ/ ನಿಗಮ/ ಮಂಡಳಿಗಳಿಂದ ಕೊಳವೆಬಾವಿ ಕೊರೆಯುವ ಕಾರ್ಯಕ್ರಮದ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೊಂದಾಯಿಸದೆ ಇರುವ ಸಂಸ್ಥೆಗಳ / ಮಾಲೀಕರನ್ನು ಟೆಂಡರ್‌ನಲ್ಲಿ ಭಾಗವಹಿಸಲು ಅನರ್ಹರೆಂದು ಪರಿಗಣಿಸತಕ್ಕದ್ದು ಹಾಗೂ ನಮೂನೆ-7ಎ ಹೊಂದಿದವರಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡುವುದು. ಈ ಬಗ್ಗೆ ತೆಗೆದುಕೊಂಡ ಕ್ರಮವನ್ನು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಅಂತರ್ಜಲ ಪ್ರಾಧಿಕಾರ ರವರಿಗೆ ಮುಂದಿನ ಕರ್ನಾಟಕ ಅಂತರ್ಜಲ ಪ್ರಾಧಿಕಾರದ ಸಭೆಗೆ ಮಾಹಿತಿಯನ್ನು ನೀಡಲು ಅನುವಾಗುವಂತೆ ತಪ್ಪದೇ ವರದಿ ನೀಡಲು ಕೋರಿದೆ.

ರವಾನಿಸಲಾಗಿದೆ
ದಿನಾಂಕ - 9 AUG 2016

(ಸಹಿ)
ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ಅಂತರ್ಜಲ ಪ್ರಾಧಿಕಾರ

ಇವರಿಗೆ,

1. ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ವಿ.ವಿ ಟವರ್, ಬೆಂಗಳೂರು.
2. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರವಲಯ, ವಿಜಯಪುರ / ದಕ್ಷಿಣ ವಲಯ ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಜಲಭವನ, ಜಯನಗರ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ಲಿಮಿಟೆಡ್ (ಕೆ.ಬಿ.ಜೆ.ಎನ್.ಎಲ್), ಕಾಫಿ ಬೋರ್ಡ್, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಕೆ.ಆರ್. ಸರ್ಕಲ್, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ, ಶಾಂತಿನಗರ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಟಿ.ಸಿ.ಎಲ್, ಖನಿಜಭವನ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೆ.ಐ.ಎ.ಡಿ.ಬಿ., ಖನಿಜಭವನ ಬೆಂಗಳೂರು.
12. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ. ಟವರ್, ಬೆಂಗಳೂರು.
13. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

D:\R & D\Ground Water 2016-17\KGA Letters.docx

Scanned by CamScanner